**ದಿನಾಂಕ 05.08.2024 ರಂದು ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ.ಎಸ್.ಕೆ. ವಕೀಲರಿಂದಃ–**

14. 1 ನೇ ಪ್ರತಿವಾದಿಗೆ ಕರ್ನಾಟಕ ರಾಜ್ಯದಲ್ಲಿ ಮಾತ್ರ ಸರಕುಗಳನ್ನು ಸರಬರಾಜು ಮಾಡುತ್ತೇವೆ. ಸರಕುಗಳನ್ನು ಡೆಲಿವರಿ ಕೊಡುವಾಗ ಇನ್ವಾಯಿಸ್ ಮತ್ತು ಇ–ಸುಗಮ್ ಬಗ್ಗೆ ದಾಖಲೆಗಳನ್ನು ನೀಡುತ್ತೇವೆ. 1 ನೇ ಪ್ರತಿವಾದಿಗೆ ಪರೀಕ್ಷಾ ವರದಿಯನ್ನು ಕರಾರು ಪ್ರಕಾರ ನೀಡಿರುವುದಿಲ್ಲ ಅಂದರೆ ಸರಿಯಲ್ಲ. ಪರೀಕ್ಷಾ ವರದಿಯನ್ನು ನ್ಯಾಯಾಲಯದ

ಮುಂದೆ ಹಾಜರುಪಡಿಸಿರುವುದಿಲ್ಲ. ಸಾಕ್ಷಿ ಸ್ವ ಹೇಳಿಕೆ, ಅದರ ಅವಶ್ಯಕತೆ ಇರುವುದಿಲ್ಲ, ಕೇಳಿದರೆ ನೀಡುತ್ತೇವೆ. ಈ ಸಾಕ್ಷಿದಾರರು ನಿಪಿ16 ನ್ನು ನೋಡುತ್ತಿದ್ದು, ಅದರಲ್ಲಿ ನಮೂದು ಮಾಡಿರುವ ಹಾಗೆ ಪರೀಕ್ಷಾ ವರದಿಯನ್ನು 1 ನೇ ಪ್ರತಿವಾದಿಗೆ ನೀಡಿರುವುದಿಲ್ಲ ಅಂದರೆ ನೀಡಲಾಗಿದೆ ಅಂತ ಉತ್ತರಿಸುತ್ತಾರೆ. ಈ ಬಗ್ಗೆ ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

15. ನಿಪಿ16 ರಿಂದ 19 ರಲ್ಲಿ ನಮೂದು ಇರುವ ಪರ್ಚೆಸ್ ಆರ್ಡರ್ ಗಳಲ್ಲಿ ಬಡ್ಡಿ ದರವನ್ನು ನಮೂದು ಮಾಡಿರುವುದಿಲ್ಲ ಅಂದರೆ ಇನ್ವಾಯಿಸ್ ಗಳಲ್ಲಿ ನಮೂದು ಇರುತ್ತದೆ ಅಂತ ಉತ್ತರಿಸುತ್ತಾರೆ. 1 ನೇ ಪ್ರತಿವಾದಿ ಪ್ರತಿ ಶತ 24 ರಷ್ಟು ಬಡ್ಡಿ ಕೊಡುವುದಾಗಿ ಯಾವುದೇ ಇ–ಮೇಲ್ ಕಳುಹಿಸಿರುವುದಿಲ್ಲ ಅಂದರೆ ಮೌಖಿಕವಾಗಿ ಹೇಳಿದ್ದರು ಮತ್ತು ಇನ್ವಾಯಿಸ್ ಗಳಲ್ಲಿ ನಮೂದು ಇದೆ ಅಂತ ಉತ್ತರಿಸುತ್ತಾರೆ. ನಿಪಿ9 ರ ಪುಟ ಸಂಖ್ಯೆ 2 ರಲ್ಲಿ ಎಷ್ಟು ಪ್ರಮಾಣದ ಸರಕುಗಳನ್ನು ಕಳುಹಿಸಲಾಗಿದೆ ಎನ್ನುವ ಬಗ್ಗೆ ನಮೂದು ಇರುವುದಿಲ್ಲ ಅಂದರೆ ಇ–ವೇ ಬಿಲ್‌ನಲ್ಲಿ ಅದನ್ನು ತೆಗೆದುಕೊಳ್ಳುವುದಿಲ್ಲ, ಮೊತ್ತದ ಬಗ್ಗೆ ನಮೂದು ಮಾಡಲಾಗಿದೆ ಅಂತ ಉತ್ತರಿಸುತ್ತಾರೆ. ನಿಪಿ9 ರ 2 ನೇ ಪುಟದಲ್ಲಿ ಇರುವ ಮಾಹಿತಿಯನ್ನು ನಮ್ಮ ಸಂಸ್ಥೆಯ ಸಿಬ್ಬಂದಿ ನೀಡಿರುತ್ತಾರೆ. ನಿಪಿ9 ರಿಂದ 15 ರಲ್ಲಿ ಇರುವ ಮಾಹಿತಿಯನ್ನು ನಾವೇ ಸುಳ್ಳು ಸೃಷ್ಟಿ ಮಾಡಿದ್ದೇವೆ ಅಂದರೆ ಸರಿಯಲ್ಲ. ಯಾವುದೇ ಪರೀಕ್ಷರು ಬಂದು ಪರೀಕ್ಷೆ ಮಾಡಿರುವುದಿಲ್ಲ. ಜಿ.ಎಸ್.ಟಿ ಬಗ್ಗೆ ಮಾಹಿತಿ ಆನ್‌ಲೈನ್ ನಲ್ಲಿ ಮಾಹಿತಿ ಸಿಗುತ್ತದೆ. ಇನ್ವಾಯಿಸ್ ಗಳಲ್ಲಿ ಜಿ.ಎಸ್.ಟಿ ಮೊತ್ತ ಸೇರಿರುತ್ತದೆ.

16. ಪ್ರತಿವಾದಿಗಳ ವಿರುದ್ಧ ಹೆಚ್ಚಿನ ಹಣವನ್ನು ವಸೂಲು ಮಾಡುವ ಸಲುವಾಗಿ ಜಿ.ಎಸ್.ಟಿ ಮೊತ್ತದ ಮೇಲೆ ಬಡ್ಡಿಯನ್ನು ಆಕರಣೆ ಮಾಡಲಾಗಿದೆ ಅಂದರೆ ಅದು ಸರ್ಕಾರಕ್ಕೆ ಹೋಗುತ್ತದೆ ಮತ್ತು ಮಾಡಬೇಕಾಗುತ್ತದೆ ಅಂತ ಉತ್ತರಿಸುತ್ತಾರೆ. ದಿನಾಂಕ 23.07.2020 ರಿಂದ 14.12.2020 ಈ ಮಧ್ಯದ ಅವಧಿಯ ಮೊತ್ತ ಪ್ರತಿವಾದಿಗಳಿಂದ ಬಾಕಿ ಇರುತ್ತದೆ. ಸದರಿ ಬಾಕಿ ಹಣ ಪಾವತಿ ಮಾಡುವ ಸಲುವಾಗಿ ಪ್ರತಿವಾದಿಗಳಿಗೆ ಗರಿಷ್ಠ 60 ದಿನಗಳ ಸಮಯ ನೀಡಲಾಗಿತ್ತು. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ 4 ನೇ ಪ್ಯಾರಾದಲ್ಲಿ ನಮೂದು ಮಾಡಿರುವ ಹಾಗೆ ರೂ.45.00 ಲಕ್ಷ ಹಣ ಮಾತ್ರ ದಿನಾಂಕ 11.09.2020 ರಿಂದ 15.03.2022 ಪಾವತಿ ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ

ಸರಿಯಲ್ಲ. ನಿಪಿ 26 ರ ಪ್ರಕಾರ ಪ್ರತಿವಾದಿಗಳಿಂದ ದಿನಾಂಕ 28.07.2020 ರಂದು ರೂ.20.00 ಲಕ್ಷ ಹಣ ಪಾವತಿ ಆಗಿರುತ್ತದೆ. ದಿನಾಂಕ 04.08.2020 ರಂದು ರೂ.20.00 ಲಕ್ಷ ಹಣ ಪಾವತಿ ಆಗಿರುತ್ತದೆ. ಸಾಕ್ಷಿ ಸ್ವ ಹೇಳಿಕೆ, ಅವು ಹಳೆಯ ಬಾಕಿ ಇರುತ್ತವೆ. ಹಳೆಯ ಬಾಕಿ ಇರುವ ಬಗ್ಗೆ ಲೆಡ್ಜರ್ ಹಾಜರುಪಡಿಸಲಾಗಿದೆ. ನಾನು ಹಳೆಯ ಬಾಕಿ ಇದ್ದ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಅಂದರೆ ಸರಿಯಲ್ಲ. ದಿನಾಂಕ 23.07.2020 ರಿಂದ 15.03.2022 ರ ಅವಧಿಯಲ್ಲಿ ಪ್ರತಿವಾದಿಗಳಿಂದ ಒಟ್ಟು ರೂ.1,38,95,233/- ಹಣ ಬಂದಿರುತ್ತದೆ. ಇದರಲ್ಲಿ ಹಳೆಯ ಬಾಕಿ ಕೂಡ ಇರುತ್ತದೆ.

17. ನಾನು ಹಾಜರುಪಡಿಸಿರುವ ಒಟ್ಟು 10 ಇನ್ವಾಯಿಸ್‌ಗಳ ಮೊತ್ತ ರೂ.1,13,52,024/- ಇರುತ್ತದೆ. ದಿನಾಂಕ 23.07.2020 ರಿಂದ 15.03.2022 ರಲ್ಲಿ ನಮೂದು ಮಾಡಿರುವ ಒಟ್ಟು ಹಣವನ್ನು ಪ್ರತಿವಾದಿಗಳು ಈಗಾಗಲೇ ವಾದಿ ಸಂಸ್ಥೆಗೆ ಮರುಪಾವತಿ ಮಾಡಿರುತ್ತಾರೆ ಅಂದರೆ ಸರಿಯಲ್ಲ. ಮರುಪಾವತಿ ಆಗಿದ್ದರೂ ಕೂಡ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಿಪಿ10 ಮತ್ತು 12 ರಲ್ಲಿ, ಹಣವನ್ನು ಕೂಡಲೇ ನೀಡಬೇಕು ಅಂತ ಕರಾರು ಇರುತ್ತದೆ. ನಿಪಿ10 ಮತ್ತು 12 ರ ಮೊತ್ತ ರೂ.21,27,704/- ಇರುತ್ತದೆ. ನಿಪಿ26 ರ ಪ್ರಕಾರ ಈ ಮೊತ್ತದ ಪೈಕಿ ರೂ.20.00 ಲಕ್ಷ ನಮಗೆ ಬಂದಿರುತ್ತದೆ ಅಂದರೆ ಅದು ಹಳೆಯ ಬಾಕಿ ಇರುತ್ತದೆ ಅಂತ ಉತ್ತರಿಸುತ್ತಾರೆ. ಹಳೆಯ ಬಾಕಿ ಬಗ್ಗೆ ವಾದ ಪತ್ರದಲ್ಲಿ, ನೋಟಿಸ್ ನಲ್ಲಿ ಮತ್ತು ಪ್ರಮಾಣ ಪತ್ರದಲ್ಲಿ ನಮೂದು ಮಾಡಿದ್ದೀರಾ ಎನ್ನುವ ಸೂಚನೆ ಮಾಡಿದ್ದು ಸದರಿ ಪ್ರಶ್ನೆ ಅಪ್ರಸ್ತುತ ಆಗಿರುತ್ತದೆ.

**(ಈ ಸಮಯದಲ್ಲಿ ಮುಂದಿನ ಪಾಟೀ ಸವಾಲನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷ್ಯವನ್ನು ಬೆರಳಚ್ಚು ಮಾಡಲಾಯಿತು)

(ಓ.ಹೇ.ಕೇ.ಸ)

**84** ನೇ ಅ.ನ.ಸಿ ಮತ್ತು ಸತ್ರ ನ್ಯಾಯಾಧೀಶರು,
ಸಿ.ಸಿ.ಎಚ್-**85**, ಬೆಂಗಳೂರು.